ಸಮಸ್ಯಾತ್ಮಕ ಗ್ರಾಮಗಳಿವೆ ಅಲ್ಲಿಗೆ ಭೂಮಿಯ ಮೇಲ್ಮೈ ನೀರನ್ನು ಕೊಡಬೇಕೆನ್ನುವ ಯೋಜನೆಯನ್ನು ರೂಪಿಸುತ್ತಿದೆ. ಈಗಾಗಲೆ ದಿ:27.11.2008ರ SLEC ಸಭೆಯಲ್ಲಿ ಈ fluoride ಅಂಶವಿರುವಂಥ ಮಾನ್ವಿ ತಾಲ್ಲೂಕಿನ 44 ಗ್ರಾಮಗಳಿಗೆ ಮತ್ತು arsenic ಅಂಶವಿರುವಂಥ ಗ್ರಾಮಗಳಿಗೆ 8.8 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕುಡಿಯುವ ನೀರನ್ನು ಕೊಡಬೇಕೆನ್ನುವ ಯೋಜನೆಗೆ ಅನುಮೋದನೆ ನೀಡಿದ್ದೇವೆ. ಈಗಾಗಲೇ ಕಾಮಗಾರಿಯನ್ನು ಕೂಡ ಆರಂಭ ಮಾಡಲಿಕ್ಕೆ ನಾವು ಸೂಚನೆಯನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ fluoride & arsenic contents ಇವೆ ಆ ಎಲ್ಲಾ ಗ್ರಾಮಗಳಿಗೂ ಕೂಡ ಭೂಮಿಯ ಮೇಲ್ಮೈ ನೀರನ್ನು ಕೊಡುವುದಕ್ಕೆ ಸರ್ಕಾರ ಈಗಾಗಲೆ ಯೋಜನೆಯನ್ನು ತಯಾರು ಮಾಡುತ್ತಿದೆ. ಖಂಡಿತವಾಗಿ, ಇಂಥ ಯೋಜನೆಗಳನ್ನು ಆದ್ಯತೆ ಮೇರೆಗೆ ತೆಗೆದುಕೊಂಡು, ಬರುವ ವರ್ಷಗಳಲ್ಲಿ ಯೋಜನೆ ಪೂರ್ಣ ಮಾಡಲಿಕ್ಕೆ ಬೇಕಾದಷ್ಟು ಹಣವನ್ನು ನಾವು ಕೊಡುತ್ತೇವೆ. ಈಗಾಗಲೆ ಜಲನಿರ್ಮಲ ಯೋಜನೆ ಮತ್ತು ರಾಜೀವ್‌ಗಾಂಧಿ Sub-mission ಯೋಜನೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ ಹಲವಾರು ಯೋಜನೆಗಳು ನಡೆಯುತ್ತಿವೆ. ಈ ಹಳ್ಳಿಗಳಿಗೂ ಕೂಡ ಕುಡಿಯುವ ನೀರನ್ನು ಕೊಡಲಿಕ್ಕೆ ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ತಮ್ಮ ಮೂಲಕ ಹೇಳಬಯಸುತ್ತೇನೆ.

ತುರುವೇಕೆರೆ ವ್ಯಾಪ್ತಿಯಲ್ಲಿ 63 ಕೆ.ವಿ. ಉಪಸ್ಥಾವರ ಕಾಮಗಾರಿ ಪ್ರಾರಂಭಿಸುವ ಬಗ್ಗೆ.

38 (125) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ)

ಶ್ರೀ ಕೆ.ಎನ್. ಈಶ್ವರಪ್ಪ (ಮಾನ್ಯ ಇಂಧನ ಸಚಿವರು)

ಅ) ತುರುವೇಕೆರೆ ಕ್ಷೇತ್ರದಲ್ಲಿ ಸೀಗೆಹಳ್ಳಿ, ತಂಡಗ, ತಾಳಕೆರೆ ಗ್ರಾಮಗಳಲ್ಲಿ 63 ಕೆ.ವಿ. ಉಪ ಸ್ಥಾವರ ಮಂಜೂರಾಗಿದ್ದು ಕೆಲಸ ಇದುವರೆಗೂ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ತುರುವೇಕೆರೆ ಕ್ಷೇತ್ರದ ತಂಡಗ ಮತ್ತು ತಾಳೆಕೆರೆ ಗ್ರಾಮಗಳಲ್ಲಿ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಸದರಿ ಕ್ಷೇತ್ರದ ಸೀಗೆಹಳ್ಳಿ ಗ್ರಾಮದಲ್ಲಿ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರದ ಸ್ಥಾಪನೆಯ ಉದ್ದೇಶ ಸದ್ಯಕ್ಕೆ ಇರುವುದಿಲ್ಲ.

ಆ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು?

1) ತಂಡಗದಲ್ಲಿ ಉದ್ದೇಶಿತ ವಿದ್ಯುತ್ ಉಪ ಕೇಂದ್ರದ ಕಾಮಗಾರಿಗಳನ್ನು 2009–10ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

2) ತಾಳಕೆರೆ ಗ್ರಾಮದ ಉದ್ದೇಶಿತ ಉಪ ಕೇಂದ್ರ ಸ್ಥಾಪನೆ ಪರಿಶೀಲನೆಯಲ್ಲಿರುತ್ತದೆ.

ಶ್ರೀ ಸಿ.ಬಿ. ಸುರೇಶ್‌ಬಾಬು(ಶ್ರೀ ಎಂ.ಟಿ. ಕೃಷ್ಣಪ್ಪನವರ ಪರವಗಿ): ಮಾನ್ಯ ಅಧ್ಯಕ್ಷರೆ, ತುರುವೇಕೆರೆ ಕ್ಷೇತ್ರದ ಸೀಗೇಹಳ್ಳಿ, ತಂಡಗ, ತಾಳಕೆರೆ ಗ್ರಾಮಗಳಲ್ಲಿ 63 ಕೆ.ವಿ. ಉಪ ಸ್ಥಾವರ ಮಂಜೂರಾಗಿದ್ದು, ಇದುವರೆಗೂ ಕೆಲಸವಾಗಿಲ್ಲ. ದಯಮಾಡಿ, ಅದಕ್ಕೇನು ಕಾರಣವೆಂದು ಸನ್ಮಾನ್ಯ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಕಾರಣ ಬೇಡ. ಈ ವರ್ಷದಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆ. 18 ತಿಂಗಳುಗಳಲ್ಲಿ ತಂಡಗ ಮತ್ತು ತಾಳಕೆರೆ ಗ್ರಾಮಗಳ ಕೆಲಸ ಮುಗಿಸುತ್ತೇವೆ. ಸೀಗೆಹಳ್ಳಿ ಬಗ್ಗೆ technical study ಯನ್ನು ನಾವು ಮಾಡುತ್ತಿದ್ದೇವೆ. ಉಳಿದೆರಡು ಹಳ್ಳಿಗಳ ಕೆಲಸವನ್ನು 18 ತಿಂಗಳುಗಳಲ್ಲಿ ಕಾಮಗಾರಿಯನ್ನು ಚಾಲೂ ಮಾಡಿಸಿ ಮುಗಿಸಿಕೊಡುತ್ತೇವೆ.

ಶ್ರೀ ಸಿ.ಬಿ. ಸುರೇಶ್‌ಬಾಬು: ಕಾಮಗಾರಿ ಮಂಜೂರಾಗಿದೆ, ಅದನ್ನು ಆದಷ್ಟು ಶೀಘ್ರವಾಗಿ ಮುಗಿಸಿಕೊಡಿ ಎಂದು ಸಚಿವರನ್ನು ಒತ್ತಾಯ ಮಾಡುತ್ತಿದ್ದೇನೆ.

ಬೇಲೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು.

39 (11) ಶ್ರೀ ರುದ್ರೇಶಗೌಡ.ವೈ.ಎನ್(ಬೇಲೂರು)

ಕು.ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರು)

ಅ) ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿ, ಬಿಕ್ಕೋಡು ಹೋಬಳಿ ಹಾಗೂ ಗೆಂಡೇಹಳ್ಳಿ ಸುತ್ತ ಮುತ್ತ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹಾಗಿದ್ದಲ್ಲಿ, ಈ ಹೋಬಳಿ ಗ್ರಾಮಗಳಿಗೆ ಬೇಲೂರು ತಾಲ್ಲೂಕಿನ ಯಗಚಿ ಯೋಜನೆಯಿಂದ ಶಾಶ್ವತವಾಗಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಾಗುವುದೇ;

ಇ) ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದೇ;

ಈ ದಿಸೆಯಲ್ಲಿ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವವಿರುವ ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.